O.S.No.41/2023.

PW1.

**ಸಾಕ್ಷಿಯನ್ನು ದಿನಾಂಕಃ 07-08-2025 ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ- ಪ್ರತಿವಾದಿ ನಂ.5 ರವರ ಪರ ಶ್ರೀ ಕೆ.ಎಮ್.ಕೆ ವಕೀಲರಿಂದ.**

ದಾವಾ ಆಸ್ತಿ ಮನೆ VPC No.495 ಇದು ಮೂಲತಃ ನನ್ನ ತಂದೆಯಾದ ಅಪ್ಪಾಸಾಬ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನಮ್ಮ ತಂದೆ ಮನೆತನದ ಅಡಚಣೆ ಸಲುವಾಗಿ ಮಾರಾಟಕ್ಕೆ ತೆಗೆದಾಗ ಪ್ರತಿವಾದಿ ನಂ.5 ರವರ ಗಂಡನಾದ ಗೋವಿಂದಪ್ಪ ಇವರು ಸದರಿ ಆಸ್ತಿಯನ್ನು ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆ ಮಾರಾಟ ಮಾಡಿರಬಹುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಮ್ಮ ಮನೆತನದ ಅಡಚಣೆಯ ಸಲುವಾಗಿ ನಮ್ಮ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಮ್ಮ ತಂದೆಗೆ ಮಾರಾಟ

ಮಾಡಲು ನಾನು, ನನ್ನ ಅಣ್ಣ ಪ್ರತಿವಾದಿ ನಂ.2 ಮತ್ತು ನನ್ನ ತಾಯಿ ಒಪ್ಪಿಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖರೀದಿ ಪತ್ರದ ಮೇಲೆ ನಾನು, ನನ್ನ ಅಣ್ಣ ಪ್ರತಿವಾದಿ ನಂ.2 ಮತ್ತು ನನ್ನ ತಾಯಿ ಹಾಗೂ ನನ್ನ ತಂದೆ ಕೂಡಿಕೊಂಡು ಖರೀದಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖರೀದಿ ಮಾಡಿದ ದಿನಾಂಕದಂದು ಇಲ್ಲಿಯವರೆಗೆ ಪ್ರತಿವಾದಿ ನಂ.5 ರವರು ಸ್ವಾಧೀನತೆಯಲ್ಲಿ ಇರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೊಸ ಮಾಡಿ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಮಾರಾಟ ಮಾಡಲು ನನಗೆ ಒಪ್ಪಿಗೆ ಇರುತ್ತದೆ ಎಂದು ನನ್ನ ಸಹೋದರಿ ಪ್ರತಿವಾದಿ ನಂ.3 ಇವರು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾವೆಲ್ಲರೂ ಕೂಡಿಕೊಂಡು ದಿನಾಂಕ 27-10-2009 ರಂದು ಪ್ರತಿವಾದಿ ನಂ.5 ರವರಿಗೆ ಖರೀದಿ ಕೊಟ್ಟಿರುವುದಕ್ಕೆ ನಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದು ನಾವು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕ 01-09-2015 ರಂದು ಹಿರಿಯರ ಸಮಕ್ಷಮ ಪ್ರತಿವಾದಿ ನಂ.5 ರವರ ಗಂಡನಾದ ಗೋವಿಂದಪ್ಪ ಇವನು ಸದರಿ ಆಸ್ತಿಯನ್ನು ಅಂದರೆ VPC No.495 ನೇದನ್ನು ಅವನ ಹೆಂಡತಿಯಾದ ಪ್ರತಿವಾದಿ ನಂ.5 ರವರಿಗೆ ಹಕ್ಕು ಪತ್ರದ ಮುಖಾಂತರ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಪ್ರತಿವಾದಿ ನಂ.5 ರವರ ಹೆಸರು ದಾವಾ ಆಸ್ತಿ VPC No.495 ಕ್ಕೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಪ್ರತಿವಾದಿ ನಂ.5 ರವರ ಗಂಡ ಖರೀದಿ ಮಾಡುವಾಗ ಅದು ಖಾಲಿ ಜಾಗೆ ಇತ್ತು ಎಂದರೆ ಸರಿ. ತದನಂತರ ಸಾಕಷ್ಟು ಖರ್ಚು ಮಾಡಿ ಪ್ರತಿವಾದಿ ನಂ.5 ರವರ ಗಂಡ ಸದರಿ ಆಸ್ತಿಯಲ್ಲಿ ಮನೆಯನ್ನು ಕಟ್ಟಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಾವು ಪ್ರತಿವಾದಿ ನಂ.5 ರವರಿಗೆ ಖರೀದಿ ಕೊಟ್ಟಿದ್ದರು ಸಹ ಇನ್ನಷ್ಟು ಹಣವನ್ನು ಪ್ರತಿವಾದಿ ನಂ.5 ರವರಿಂದ ವಸೂಲಿ ಮಾಡಬೇಕೆಂದು ನಾನು ಈ ಒಂದು ಸುಳ್ಳು ದಾವೆಯನ್ನು ಅವಳ ವಿರುದ್ದ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ-2 ಖರೀದಿ ಪತ್ರದ ಮೇಲೆ ನನ್ನ ಭಾವಚಿತ್ರ ಮತ್ತು ನನ್ನ ಸಹಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊಸತನದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಮುಖಾಂತರ ನಾನು, ನನ್ನ ತಾಯಿ ಮತ್ತು ನನ್ನ ಸಹೋದರ ಪ್ರತಿವಾದಿ ನಂ.2 ಮತ್ತು ನನ್ನ ತಂದೆ ಅಪ್ಪಾಸಾಬ ಇವರು ಕೂಡಿಕೊಂಡು ದಾವಾ ಆಸ್ತಿ ಮನೆ ನಂ.495 ನ್ನು ಪ್ರತಿವಾದಿ ನಂ.5 ರವರ ಗಂಡನಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಮೇಲೆ ನನ್ನ, ನನ್ನ ತಾಯಿ ಮತ್ತು ನನ್ನ ಸಹೋದರ ಪ್ರತಿವಾದಿ ನಂ.2 ಮತ್ತು ನನ್ನ ತಂದೆ ಅಪ್ಪಾಸಾಬ ಇವರ ಭಾವಚಿತ್ರಗಳು ಮತ್ತು ಸಹಿಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 27-10-2009 ರಂದು ನನ್ನ ಸಹೋದರಿಯಾದ ಪ್ರತಿವಾದಿ ನಂ.3 ಇವಳು ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಕ್ಕೆ ನನ್ನದು ಯಾವುದೇ ತಕರಾರು ಇರುವುದಿಲ್ಲ ಎಂದು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಮ್ಮ ಮನೆತನದ ಅಡಚಣೆ ಸಲುವಾಗಿ ನಾವು ಮಾರಾಟ ಮಾಡಿದ್ದರೂ ಸಹಿತ ಮಾರಾಟ ಮಾಡಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ನಾವು ಬರೆದುಕೊಟ್ಟಿದ್ದರೂ ಸಹಿತ ಪ್ರತಿವಾದಿ ನಂ.5 ರವರ ಗಂಡ ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾವು ಎಲ್ಲರೂ ಮಾರಾಟ ಮಾಡಿದ್ದರಿಂದ ಇದರಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.5 ರವರ ಗಂಡ ಸದರಿ ಆಸ್ತಿಯನ್ನು ಖರೀದಿ ಮಾಡುವುದಕ್ಕಿಂತ ಮುಂಚೆ ಅದರ ಬಗ್ಗೆ ಎಲ್ಲ ಪರಿಶೀಲನೆ ಮಾಡಿ ಖರೀದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

**ಸಾಕ್ಷಿಯ ಸಹಿ:**

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.08.18 16:57:56 +0530